ಅನಿಸಿತು. 'ನನಗೆ ಬೇಕಾದ್ದು ಹೂಗುಚ್ಛ! ಬರ್ತ್ ಡೇಗೆ ಕೊಡುತ್ತಾರಲ್ಲ, ಅಂಥಾದ್ದು,' ಎಂದೆ. ಒಹ್ಹೋ ಎಂದು ರಾಗ ಎಳೆದರು. ನನ್ನ ಫಜೀತಿ ಕಂಡ ಒಬ್ಬ ಪಾದಚಾರಿ, 'ನೋಡಿ, ನಿಮಗೆ ಬೇಕಾದ್ದು ಓ ಅಲ್ಲಿ ಆ ಅಂಗಡಿಯಲ್ಲಿ ಸಿಗಬಹುದು,' ಎಂದು ಕೈತೋರಿಸಿದರು. ನಾನು ಆ ಕಡೆ ಸೈಕಲ್ ದೂಡಿಕೊಂಡು ಹೋದೆ. ಅದೊಂದು ಹೂ ಮಾರುವ ಪಕ್ಕಾ ಅಂಗಡಿ—ಫುಟ್‌ಪಥದ ಅಂಗಡಿಯಲ್ಲ. 'ನನಗೊಂದು ಬುಕೆ ಬೇಕಿತ್ತು,' ಎಂದೆ. ಅಲ್ಲಿ ಬುಕೆ ಸಿದ್ಧಪಡಿಸಿ ಮಾರಲು ಇಡುತ್ತಿರಲಿಲ್ಲ; ಆರ್ಡರ್ ಕೊಟ್ಟರೆ ಮಾರನೇ ದಿನ ಸಿಗುತ್ತದೆ ಎಂದು ಗೊತ್ತಾಯಿತು. ಐವತ್ತು ರೂಪಾಯಿ ಮುಂಗಡ ಇಸಕೊಂಡರು; ನಾಳೆ ಮುಂಜಾನೆ ಬನ್ನಿ ಎಂದರು. ಯಾವ ರೀತಿಯದು ಬೇಕು ಎಂದು ಮುಂತಾಗಿ ವಿಚಾರಿಸಲಿಲ್ಲ; ಬಹುಶಃ ಅವರು ಮಾಡುತ್ತಿರುವುದು ಒಂದೇ ಥರದ್ದು ಇರಬಹುದು ಎನಿಸಿತು. ನನಗೂ ಹುಡುಗಿಯೊಬ್ಬಳಿಗೆ ಕೊಡುವ ಬುಕೆ ಹೇಗಿರಬೇಕು ಎಂಬ ಬಗ್ಗೆ ಅರಿವಿರಲಿಲ್ಲ. ಬುಕೆ ಎಂದರೆ ಬುಕೆ. ಅದರಲ್ಲಿರುವ ಹೂಗಳು ಮುಖ್ಯವೇನೋ ನಿಜ; ಆದರೆ, ಅದಕ್ಕಿಂತಲೂ ಹೆಚ್ಚಾಗಿ ಅದರಲ್ಲಿ ತುಂಬಿದ ಭಾವನೆಗಳೇ ಮುಖ್ಯವಲ್ಲವೇ? ಅವುಗಳ ಕೊರತೆ ನನಗಂತೂ ಇರಲಿಲ್ಲ. ಸರಿ, ಮರುದಿನ ಸುಮಾರು ಎಂಟೂವರೆಗೆ ಕಾಲೇಜಿಗೆ ಹೊರಟವನು ದಾರಿಯಲ್ಲಿ ಬುಕೆ ಕಲೆಕ್ಟ್ ಮಾಡಿಕೊಂಡೆ. ಅದನ್ನು ಸಾರ್ವಜನಿಕವಾಗಿ ಪ್ರದರ್ಶಿಸುವುದು ಬೇಡವೆಂದು ಒಂದು ಪೇಪರಿನಲ್ಲಿ ಕಟ್ಟಿಕೊಡಲು ಹೇಳಿದೆ. ಹಾಗೇ ಮಾಡಿದರು. ಬುಕೆಯೊಂದಿಗೆ ಕಾಲೇಜಿಗೆ ಬರುತ್ತಿರುವಂತೆ, ಇದನ್ನು ಏಂಜೆಲ್‌ಗೆ ಕೊಡುವುದು ಹೇಗೆ ಎಂಬ ಸಮಸ್ಯೆ ಎದುರಾಯಿತು. ಹೂಗುಚ್ಛ ನೀಡುವುದಿರಲಿ, ನಾನಿದುವರೆಗೆ ಅವಳನ್ನು ಮಾತಾಡಿಸಿದ್ದೇ ಇರಲಿಲ್ಲ. ಎದೆ ಡವ ಡವ ಎನ್ನತೊಡಗಿತು. ಮನುಷ್ಯನಿಗಿರುವ ಭಯಗಳಲ್ಲಿ ದಾರುಣವಾದ ಒಂದು ಭಯವೆಂದರೆ ತಿರಸ್ಕಾರದ ಭಯ. ಅದು ನನ್ನನ್ನು ಕಾಡತೊಡಗಿತು. ಆದರೆ, ಅದನ್ನು ಮೀರದೆ ನಾನು ಜೀವನದಲ್ಲಿ ಮುಂದುವರಿಯುವುದು ಸಾಧ್ಯವಿರಲಿಲ್ಲ. ಮೀರಬೇಕಾದರೆ, ಪ್ರಯತ್ನಿಸಿ ನೋಡಬೇಕು. ಏಂಜೆಲ್ ಸಮಯಕ್ಕೆ ಸರಿಯಾಗಿ ಕಾಲೇಜಿಗೆ ಬರುತ್ತಿದ್ದವಳು—ಅವಳಿಗೆ ಹೆಚ್ಚು ಗೆಳತಿಯರೂ ಇರಲಿಲ್ಲ. ಆದ್ದರಿಂದ ಕಾಲೇಜು ಗೇಟಿನ ಹತ್ತಿರ ಪ್ರಾಂಗಣದಲ್ಲಿ ಕಾದು ನಿಂತೆ. ವಾಚ್‌ಮನ್ ನೋಡುತ್ತಿದ್ದ; ಅವನಿಗೆ ಏನು ನಡೆಯುತ್ತಿದೆ ಎಂದು ಗೊತ್ತಿತ್ತು. ತಮಾಷೆ ನೋಡುವವನಂತೆ ಇದ್ದ. ಏಂಜೆಲ್ ಒಳಗೆ ಕಾಲಿಟ್ಟ ಕೂಡಲೇ, ನನ್ನ ಕೆಲಸ ಮುಗಿಸುವವನಂತೆ ಅವಳಿಗೆ ಹೂಗುಚ್ಛ ನೀಡಿ, 'ಇದು ನಿಮಗೆ!' ಎಂದೆ. ಅದನ್ನು ಕೈಯಲ್ಲಿ ಹಿಡಿದು ಮೂಸಿ ನನಗೆ ಮರಳಿಸಿದಳು. ಅವಳು ಸಾಧಾರಣವಾಗಿ ಹೀಗೇ ಮಾಡುವುದು ಎಂಬುದು ನನಗೆ ಬೇರೆಯವರ ಮಾತಿನಿಂದ ಕೇಳಿ ಗೊತ್ತಿತ್ತು. ಆದ್ದರಿಂದ ಬೇಜಾರೇನೂ ಅನಿಸಲಿಲ್ಲ. ಅವಳು ಗುಚ್ಛವನ್ನು ಕೈಯಲ್ಲಿ ತೆಗೆದುಕೊಂಡಳಲ್ಲ, ಆಘ್ರಾಣಿಸಿದಳಲ್ಲ—ಅಷ್ಟು ಸಾಕಿತ್ತು. ಇನ್ನು ಅದನ್ನು ಕೊಟ್ಟವನಿಗೇ ಮರಳಿಸುವುದು ಅವಳ ವ್ಯಕ್ತಿತ್ವದ ಹಕ್ಕು ಎನಿಸಿತು. ಅಲ್ಲದೆ, ಇದು ಅನೇಕ ಕೊಟ್ಟುದು ಎಂದು ಹೇಳುತ್ತಾ ದಿನವಿಡೀ ಇಟ್ಟುಕೊಂಡು ಮನೆಗೆ ಒಯ್ಯುವುದು ಅವಳಿಗೆ ಶೋಭೆ ತರುತ್ತದೆಯೇ? ಖಂಡಿತಾ ಇಲ್ಲ. ನಾನದನ್ನು ಪ್ರಸಾದದಂತೆ ವಾಪಸು ತೆಗೆದುಕೊಂಡು ಇನ್ನೇನು ಮಾಡುವುದು ಎಂದು ಚಿಂತಿಸುತ್ತಿರುವಷ್ಟರಲ್ಲಿ ಏಂಜೆಲ್‌ನ ಬಾಯಿಯಿಂದ 'ಏಕ್ಷೀ!' ಎಂಬ ಸದ್ದು ಹೊರಟಿತು. ಭಯಂಕರವಾದ ಸೀನು. ಅದರ ಬೆನ್ನ ಹಿಂದೆಯೇ ಅದಕ್ಕಿಂತಲೂ ಜೋರಾದ ಇನ್ನೊಂದು ಸೀನು. ಸೀನಿನ ಮೇಲೆ ಸೀನು. ಸರಣಿ ಸೀನುಗಳು ಅವು. ಹತ್ತೋ ಇಪ್ಪತ್ತೋ, ಎಷ್ಟೋ. ನಾನು ಎಣಿಸಲಿಲ್ಲ. ಅವಳ ಕಣ್ಣುಗಳು ಕೆಂಗುಲಾಬಿಯ ಬಣ್ಣಕ್ಕೆ ತಿರುಗಿದುವು, ಕಣ್ಣೀರೂ ಹೊರಟಿತು. ಏಂಜೆಲ್ ಸೀನನ್ನು ತಡೆಯುವ ಹರಸಾಹಸ ಮಾಡುತ್ತಿದ್ದಳು; ಆದರೆ, ತಡೆಯುವ ಸೀನು ಅದಾಗಿರಲಿಲ್ಲ. ಎಹ್ ಎಹ್ ಎಹ್ ಎನ್ನುತ್ತಲೇ ಸೀನು ಕೂಡ ಹೊರ ಧಾವಿಸುತ್ತಿತ್ತು. ಇವಳಿಗೆ ಇಷ್ಟೊಂದು ಶಕ್ತಿ ಎಲ್ಲಿಂದ ಬಂತು ಎಂದು ನೋಡಿದವರು ಆಶ್ಚರ್ಯಪಡಬೇಕು. ಆದರೆ, ಅದು ಅವಳ ಶಕ್ತಿಯಾಗಿರಲಿಲ್ಲ. ಯಾವುದೋ ಹೊರಗಿನ ಶಕ್ತಿಯೊಂದು ಅವಳನ್ನು ಪ್ರವೇಶಿಸಿ ಇಡೀ ದೇಹವನ್ನು ಎತ್ತಿ ಅಪ್ಪಳಿಸಲು ಯತ್ನಿಸುತ್ತಿತ್ತು. ಅವಳು ಸೊರಗಿ